ಶ್ರೀಶಂಕರಾಚಾರ್ಯರವರ ಗ್ರಂಥಗಳು

# ಪ್ರಕರಣಗಳು

ಸಂಪುಟ ೨

(ಸ್ವಾತ್ಮನಿರೂಪಣ, ಮನೀಷಾಪಂಚಕ, ನಿರ್ವಾಣಷಟ್ಕ,
ಬ್ರಹ್ಮಾನುಚಿಂತನ, ಸದಾಚಾರಾನುಸಂಧಾನ, ದಶಶ್ಲೋಕೀ)

ಬರೆದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ – ೫೭೩ ೨೧೧
೨೦೦೨
ದೂರವಾಣಿ: ೦೮೧೭೫–೭ ೩೮೨೦

<u>ಅಧ್ಯಾತ್ಮಗ್ರಂಥಾವಳಿ</u>

ಶ್ರೀಶಂಕರಾಚಾರ್ಯವಿರಚಿತ

# ನಿರ್ವಾಣಷಟ್ಕ

ಸಂಸ್ಕೃತಮೂಲ, ಅನುವಾದ, ಟಿಪ್ಪಣಿ – ಮುಂತಾದವುಗಳೊಡನೆ

ಬರೆದವರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೨೫

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
(ಪಬ್ಲಿಕ್ ಛಾರಿಟಬಲ್ ಟ್ರಸ್ಟ್)
ಹೊಳೆನರಸೀಪುರ.
೨೦೦೨

ಮೊದಲನೆಯ ಸಂಸ್ಕರಣ ೧೯೫೬ (೧೦೦೦ ಪ್ರತಿಗಳು)
ಎರಡನೆಯ ಮುದ್ರಣ ೨೦೦೨ ( ೧೦೦೦ ಪ್ರತಿಗಳು)

© ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
**All Rights Reserved**

ಅಕ್ಷರಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. ೪೫, ೩ನೇ ಮುಖ್ಯರಸ್ತೆ, ನಾಗಸಂದ್ರ
ತ್ಯಾಗರಾಜನಗರ ಅಂಚೆ, ನಾಗಸಂದ್ರ, ಬೆಂಗಳೂರು – ೨೮
✆ ೬೭೬೪೬೫೦

ಮುದ್ರಣಸ್ಥಾನ :
**ಸ್ಟಾಂಡರ್ಡ್ ಪ್ರಿಂಟರ್ಸ್**
ಶಂಕರ ಮಠದ ರಸ್ತೆ, ಶಂಕರಪುರಂ
ಬೆಂಗಳೂರು – ೫೬೦ ೦೦೪
✆ ೬೫೨೧ ೫೨೭

## ಪೀಠಿಕೆ

ಈ ಗ್ರಂಥಕ್ಕೆ "ಆತ್ಮಷಟ್ಕ"ವೆಂದೂ ಹೆಸರುಂಟು. ಇದು ಯಾವದಾದರೊಂದು ಶಂಕರವಿಜಯಲ್ಲಿದ್ದಿರಬಹುದೆ ?– ಎಂಬುದು ಅನ್ವೇಷಣೀಯವಾಗಿದೆ.

ಗ್ರಂಥದ ಪ್ರತಿಯೊಂದು ಶ್ಲೋಕದಲ್ಲಿಯೂ 'ಚಿದಾನಂದರೂಪನಾದ ಶಿವನು ನಾನು !' ಎಂಬರ್ಥದ ಪಲ್ಲವಿಯಿದೆ. ಆದರೆ ಭಾಷ್ಯಗ್ರಂಥಗಳಲ್ಲಿ 'ಚಿದಾನಂದ ರೂಪಶಿವ' ಎಂಬೀ ರೀತಿಯ ಪ್ರಯೋಗವು ಕಂಡುಬಂದಿಲ್ಲ.

ಈ ಪ್ರಕರಣವೂ "ಮನೀಷಾಪಂಚಕ"ದಂತೆ ಬಹಳವಾಗಿ ಜನಾನುರಾಗವನ್ನು ಸಂಪಾದಿಸಿಕೊಂಡಿರುತ್ತದೆ. ಇದನ್ನು ಅನೇಕ ಮುಮುಕ್ಷುಗಳು ಅರ್ಥಾನುಸಂಧಾನ ಪೂರ್ವಕವಾಗಿ ಹಾಡಿಕೊಂಡು ನಲಿಯುತ್ತಾರೆ. ಆದ್ದರಿಂದ ಶಾಂಕರಕೃತಿಮಾಲೆಯಲ್ಲಿ ಸೇರಿರುವದಕ್ಕೆ ತಕ್ಕದ್ದಾಗಿರುತ್ತದೆ.

ಅಧ್ಯಾತ್ಮಪ್ರಕಾಶಕಾರ್ಯಾಲಯ,
ದುರ್ಮುಖಿಸಂವತ್ಸರ,
ಚೈತ್ರ ಬಹುಳ 13 (1956) ಅನುವಾದಕ.

॥ ಓಮ್ ॥

# ನಿರ್ವಾಣಷಟ್ಕಮ್

ಮನೋಬುದ್ಧ್ಯಹಂಕಾರಚಿತ್ತಾನಿ ನಾಹಂ
ನ ಚ ಶ್ರೋತ್ರಜಿಹ್ವೇ[1] ನ ಚ ಘ್ರಾಣನೇತ್ರೇ
ನ ಚ ವ್ಯೋಮಭೂಮಿರ್ನ ತೇಜೋ ನ ವಾಯು–
ಶ್ಚಿದಾನನ್ದರೂಪಃ ಶಿವೋಽಹಂ ಶಿವೋಽಹಮ್ ॥೧॥

೧. ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ – ಇವು ಯಾವವೂ ನಾನಲ್ಲ; ಶ್ರೋತ್ರವಾಗಲಿ ಜಿಹ್ವೇಂದ್ರಿಯವಾಗಲಿ ನಾನಲ್ಲ, ಘ್ರಾಣನೇತ್ರೇಂದ್ರಿಯಗಳೂ ಅಲ್ಲ.[2] ಆಕಾಶವಲ್ಲ, ಪೃಥ್ವಿಯಲ್ಲ, ತೇಜಸ್ಸಲ್ಲ, ವಾಯುವಲ್ಲ, ಚಿದಾನಂದರೂಪನಾದ ಶಿವನೇ ನಾನು, ಶಿವನೇ ನಾನು !

ನ ಚ ಪ್ರಾಣಸಂಜ್ಞೋ ನ ವೈ ಪಞ್ಚವಾಯು–
ರ್ನ ವಾ ಸಪ್ತಧಾತುರ್ನ ವಾ ಪಞ್ಚಕೋಶಃ ।
ನ ವಾಕ್ಪಾಣಿಪಾದೌ ನ ಚೋಪಸ್ಥಪಾಯೂ
ಚಿದಾನನ್ದರೂಪಃ ಶಿವೋಽಹಂ ಶಿವೋಽಹಮ್ ॥೨॥

೨. ಪ್ರಾಣನೆಂಬ ಹೆಸರಿನವನೂ ಅಲ್ಲ, ಪಂಚವಾಯುಗಳೂ ಅಲ್ಲ.[3] ಸಪ್ತಧಾತುಗಳಲ್ಲ[4], ಪಂಚಕೋಶಗಳೂ ಅಲ್ಲ.[5] ವಾಕ್ಪಾಣಿಪಾದಗಳಲ್ಲ,

---

1.'ನ ಕರ್ಣಂ ನ ಜಿಹ್ವಾ' ವಾ ॥

2. ಮನೋಬುದ್ಧ್ಯಹಂಕಾರಚಿತ್ತಗಳು – ನಾಲ್ಕು ಬೇರೆಬೇರೆಯಲ್ಲ ; ವೃತ್ತಿಭೇದದಿಂದ ಅಂತಃಕರಣಕ್ಕೇ ಈ ನಾಲ್ಕು ಹೆಸರುಗಳು. ಶ್ರೋತ್ರಜಿಹ್ವೆಗಳನ್ನೂ ಘ್ರಾಣನೇತ್ರಗಳನ್ನೂ ಸಮಾಸ ಮಾಡಿ ಹೇಳಿರುವದಕ್ಕೆ ಕಾರಣವೇನೋ ತಿಳಿಯಲಿಲ್ಲ.

3.ಪ್ರಾಣವು ಅಧ್ಯಾತ್ಮವು, ವಾಯು ಆಧಿದೈವಿಕವು – ಎಂಬುದು ವೇದಾಂತದಲ್ಲಿಯೂ ಸಾಂಖ್ಯದಲ್ಲಿಯೂ ಸಾಮಾನ್ಯವಾಗಿರುವ ವಿಭಾಗ. ಆದರೆ ಆಧಿದೈವಿಕವು ಐದು ವಿಧವೆಂಬುದು ಹೇಗೆಂಬುದು ವಿಚಾರಣೀಯವಾಗಿದೆ.

4.ದೇಹದ ಮಾಂಸರಕ್ತಾದಿಭಾಗಗಳು ಏಳು. ಅವು ಯಾವುವೆಂದರೆ ಚರ್ಮ, ಮಾಂಸ, ರಕ್ತ, ಮೇದಸ್ಸು, ಮಜ್ಜೆ, ನರಗಳು, ಎಲುಬು.

5.ಮೂಲದಲ್ಲಿ ಸಪ್ತಧಾತುಃ, ಪಂಚಕೋಶಃ– ಎಂದು ಏಕವಚನಾಂತಪ್ರಯೋಗವನ್ನು ಮಾಡಿರುವದೇಕೆಂಬುದು ತಿಳಿಯಲಿಲ್ಲ.

ಪಾಯೂಪಸ್ಥಗಳೂ ಅಲ್ಲ. ಚಿದಾನಂದರೂಪನಾದ ಶಿವನೇ ನಾನು, ಶಿವನೇ ನಾನು!

ನ ಮೇ ದ್ವೇಷರಾಗೌ ನ ಮೇ ಲೋಭಮೋಹೌ
ಮದೋ ನೈವ ಮೇ ನೈವ ಮಾತ್ಸರ್ಯಭಾವಃ ।
ನ ಧರ್ಮೋ ನ ಚಾರ್ಥೋ ನ ಕಾಮೋ ನ ಮೋಕ್ಷ–
ಶ್ಚಿದಾನನ್ದರೂಪಃ ಶಿವೋಽಹಂ ಶಿವೋಽಹಮ್ ॥೩॥

೩. ನನಗೆ ರಾಗದ್ವೇಷಗಳಿಲ್ಲ, ನನಗೆ ಲೋಭಮೋಹಗಳಿಲ್ಲ. ಮದವು ನನಗೆ ಇಲ್ಲವೇ ಇಲ್ಲ, ಮಾತ್ಸರ್ಯಭಾವವೂ ಇಲ್ಲವೇ ಇಲ್ಲ.[1] ಧರ್ಮವಿಲ್ಲ, ಅರ್ಥವಿಲ್ಲ, ಕಾಮವಿಲ್ಲ, ಮೋಕ್ಷವಿಲ್ಲ.[2] ಚಿದಾನಂದರೂಪನಾದ ಶಿವನೇ ನಾನು, ಶಿವನೇ ನಾನು !

ನ ಪುಣ್ಯಂ ನ ಪಾಪಂ ನ ಸೌಖ್ಯಂ ನ ದುಃಖಂ
ನ ಮನ್ತ್ರೋ ನ ತೀರ್ಥಂ ನ ವೇದಾ ನ ಯಜ್ಞಾಃ ।
ಅಹಂ ಭೋಜನಂ ನೈವ ಭೋಜ್ಯಂ ನ ಭೋಕ್ತಾ
ಶ್ಚಿದಾನನ್ದರೂಪಃ ಶಿವೋಽಹಂ ಶಿವೋಽಹಮ್ ॥೪॥

೪. ಪುಣ್ಯವಿಲ್ಲ, ಪಾಪವಿಲ್ಲ ; ಸೌಖ್ಯವಿಲ್ಲ, ದುಃಖಗಳಿಲ್ಲ ; ಮಂತ್ರವಿಲ್ಲ, ತೀರ್ಥವಿಲ್ಲ, ವೇದವಿಲ್ಲ, ಯಜ್ಞಗಳಿಲ್ಲ. ನಾನು ಭೋಜನವಲ್ಲ, ಭೋಜ್ಯವಲ್ಲ, ಭೋಕ್ತೃವಲ್ಲ.[3] ಚಿದಾನಂದರೂಪನಾದ ಶಿವನೇ ನಾನು, ಶಿವನೇ ನಾನು !

---

1. ಮನೋಬುದ್ಧ್ಯಾದಿಗಳು ನಾನಲ್ಲ ಎಂದು ಒಂದನೆಯ ಶ್ಲೋಕದಲ್ಲಿ ಹೇಳಿತ್ತು ; ಇಲ್ಲಿ ಅವುಗಳ ಧರ್ಮವಾದ ರಾಗದ್ವೇಷಾದಿಗಳು ನನಗಿಲ್ಲ ಎಂದಿದೆ. ಆತ್ಮನ ಅದ್ವಿತೀಯತ್ವವನ್ನು ಮನದಂದುಕೊಳ್ಳುವದಕ್ಕೆ ಸಾಕ್ಷಿಯಾದ ಆತ್ಮನಿಗೂ ಮನಆದಿಗಳಿಗೂ ಇರುವ ಅನ್ಯೋನ್ಯಾಧ್ಯಾಸವನ್ನು ಕಳೆದುಕೊಳ್ಳುವದು ಅವಶ್ಯವೆಂದು ಹೇಳಿದಂತೆ ಆಯಿತು.

2. ಜ್ಞಾನಿಗೆ ಪರಿಹರಣೀಯವಾದ ಅನರ್ಥಗಳಿಲ್ಲದಿರುವಂತೆ ಸಂಪಾದನೀಯವಾದ ಪುರುಷಾರ್ಥಗಳೂ ಇರುವದಿಲ್ಲ ; ಏಕೆಂದರೆ ಅವನು ಅದ್ವಿತೀಯಸ್ವರೂಪನಾದ ಆತ್ಮನೇ ಆಗಿರುತ್ತಾನೆ.

3. ಈ ಶ್ಲೋಕದಲ್ಲಿ ಆತ್ಮನಿಗೆ ಕರ್ತೃತ್ವಭೋಕ್ತೃತ್ವಗಳನ್ನು ಅಲ್ಲಗಳೆದಿದೆ ; ಕ್ರಿಯಾಕಾರಕಫಲರೂಪವಾದ ಸಂಸಾರವೇ ಅವನಿಗಿಲ್ಲವೆಂದಿದೆ. ಜ್ಞಾನಿಗೆ ಪಾಪಪುಣ್ಯಗಳೆರಡೂ ಆತ್ಮನೇ ಎಂಬುದಕ್ಕೆ ತೈ. ೨–೯ನ್ನು ನೋಡಿ.

ನ ಮೃತ್ಯುರ್ನ ಶಙ್ಕಾ ನ ಮೇ ಜಾತಿಭೇದಃ
ಪಿತಾ ನೈವ ಮೇ ನೈವ ಮಾತಾ ಚ ಜನ್ಮ ।
ನ ಬನ್ಧುರ್ನ ಮಿತ್ರಂ ಗುರುರ್ನೈವ ಶಿಷ್ಯ–
ಶ್ಚಿದಾನನ್ದರೂಪಃ ಶಿವೋಽಹಂ ಶಿವೋಽಹಮ್ ॥೫॥

೫. ನನಗೆ ಮರಣವಿಲ್ಲ, ಭಯವಿಲ್ಲ, ಜಾತಿಭೇದವೂ ಇಲ್ಲ. ತಂದೆಯಿಲ್ಲ, ನನಗೆ ತಾಯಿಯೂ ಇಲ್ಲ, ಜನ್ಮವೇ ಇಲ್ಲ. ಬಂಧುವಿಲ್ಲ, ಮಿತ್ರನಿಲ್ಲ ಗುರುವಿಲ್ಲ, ಶಿಷ್ಯನೂ ಇಲ್ಲವೇಇಲ್ಲ.[1] ಚಿದಾನಂದರೂಪನಾದ ಶಿವನೇ ನಾನು, ಶಿವನೇ ನಾನು !

ಅಹಂ ನಿರ್ವಿಕಲ್ಪೋ ನಿರಾಕಾರರೂಪೋ
ವಿಭುತ್ವಾಚ್ಚ ಸರ್ವತ್ರ ಸರ್ವೇನ್ದ್ರಿಯಾಣಾಮ್ ।
ನ ಚಾಸಂಗತಂ ನೈವ ಮಾತಾ ನ ಮೇಯ[2]
ಶ್ಚಿದಾನನ್ದರೂಪಃ ಶಿವೋಽಹಂ ಶಿವೋಽಹಮ್ ॥೬॥

೬. ನಾನು ನಿರ್ವಿಕಲ್ಪನು, ನಿರಾಕಾರರೂಪನು, ಏಕೆಂದರೆ ಎಲ್ಲೆಲ್ಲಿಯೂ ಎಲ್ಲಾ ಇಂದ್ರಿಯಗಳಿಗೂ ವ್ಯಾಪಕನಾಗಿರುತ್ತೇನೆ.[3] ಇದು ಅಸಂಗತವೂ ಅಲ್ಲ ; ನಾನು ಪ್ರಮಾತೃವೂ ಪ್ರಮೇಯವೂ ಅಲ್ಲ.[4] ಚಿದಾನಂದರೂಪನಾದ ಶಿವನೇ ನಾನು, ಶಿವನೇ ನಾನು !

ಓಂ ತತ್ಸತ್

–––––

1. ಇಲ್ಲಿ ಕರ್ಮನಿಮಿತ್ತವಾದ ಸಂಬಂಧಗಳು ಯಾವವೂ ಜ್ಞಾನಿಗಿಲ್ಲವೆಂದಿದೆ.

2. 'ನ ಮುಕ್ತಿರ್ನ ಬನ್ಧಃ' ಪಾ ॥

3. ಸರ್ವೇಂದ್ರಿಯಗಳೂ ಸರ್ವತ್ರ ವ್ಯಾಪಕವಾಗಿರುವವು – ಎಂದೂ ಈ ವಾಕ್ಯವನ್ನು ಕನ್ನಡಿಸಬಹುದು ; ಇದಕ್ಕೆ ಬೃ.೧–೫–೧೩ರ ಆಧಾರವೂ ಇದೆ. ಆದರೆ ಆತನು ಸರ್ವೇಂದ್ರಿಯಗಳನ್ನೂ ವ್ಯಾಪಿಸಿಕೊಂಡಿರುವದರಿಂದ ಒಂದೊಂದು ಗೊತ್ತಾದ ಕಾರ್ಯಕರಣಸಂಘಾತಕ್ಕೆ ಕಟ್ಟುಬಿದ್ದಿರುವದಿಲ್ಲವಾಗಿ ನಿರ್ವಿಕಲ್ಪನು, ನಿರಾಕಾರನು – ಎಂಬ ಅಭಿಪ್ರಾಯಕ್ಕೆ ನಾವು ಮಾಡಿರುವ ಅನುವಾದವೇ ಹೆಚ್ಚು ಒಪ್ಪುತ್ತದೆ.

4. ಮುಕ್ತಿಯಿಲ್ಲ, ಬಂಧವೂ ಇಲ್ಲ–ಎಂಬುದು ಪಾ ॥ ಪಾಠಾಂತರಕ್ಕೆ ತಕ್ಕ ಅನುವಾದ. ಆದರೆ ಗೊತ್ತಾದ ಪ್ರಮಾಣಗಳ ಸಂಬಂಧವಿಲ್ಲದ್ದರಿಂದ ಆತ್ಮನು ಪ್ರಮಾತೃವೂ ಅಲ್ಲ– ಎಂಬ ವಾಕ್ಯವು ಹೆಚ್ಚಿನ ಭಾವಗರ್ಭಿತವಾಗಿರುತ್ತದೆ.

# ಶ್ಲೋಕಾನುಕ್ರಮಣಿಕೆ


| ಪ್ರತೀಕಗಳು | ಶ್ಲೋಕಸಂಖ್ಯೆ |
|---|---|
| ಅಹಂ ನಿರ್ವಿಕಲ್ಪೋ | ೬ |
| ನ ಚ ಪ್ರಾಣಸಂಜ್ಞೋ | ೨ |
| ನ ಪುಣ್ಯಂ ನ ಪಾಪಮ್ | ೪ |
| ನ ಮೃತ್ಯುರ್ನ ಶಙ್ಕಾ | ೫ |
| ನ ಮೇ ದ್ವೇಷರಾಗೌ | ೩ |
| ಮನೋಬುದ್ಧ್ಯಹಂಕಾರಚಿತ್ತಾನಿ | ೧ |


-----

# ಶಬ್ದಾನುಕ್ರಮಣಿಕೆ

ಇಲ್ಲಿ *ನಕ್ಷತ್ರಚಿಹ್ನೆ ಇರುವ ಶಬ್ದಗಳು ಭಾಷ್ಯದಲ್ಲಿ ಈ ಅರ್ಥದಲ್ಲಿ ಪ್ರಚುರವಾಗಿ ಪ್ರಯುಕ್ತವಾಗಿಲ್ಲ. ಸಂಖ್ಯೆಗಳು ಶ್ಲೋಕವನ್ನು ಪರಾಮರ್ಶಿಸುತ್ತವೆ.

೧. **ಅಹಙ್ಕಾರಃ–**
ಅಭಿಮಾನಾತ್ಮಕವಾದ ಅಂತಃಕರಣ, ೧

೨. **ಚಿತ್ತಮ್–**
ಅನುಸಂಧಾನಸ್ಮರಣರೂಪವಾದ ಅಂತಃಕರಣ, ೧

೩. **ಚಿದಾನನ್ದರೂಪಃ–**
ಜ್ಞಾನ ಮತ್ತು ಆನಂದ – ಇವುಗಳ ಸ್ವರೂಪದ ಆತ್ಮ ೧ ರಿಂದ ೬

೪. *** ನಿರ್ವಿಕಲ್ಪಃ–**
ಯಾವ ವಿಕಲ್ಪವೂ ಇಲ್ಲದ, ನಿರ್ವಿಶೇಷವಾದ, ೬.

೫. ***ಪಞ್ಚಕೋಶಃ–**
ಐದು ಕೋಶಗಳ ಒಟ್ಟು, ೨.

೬. **ಬುದ್ಧಿಃ–**
ನಿಶ್ಚಯಾತ್ಮಕವಾದ ಅಂತಃಕರಣ, ೧

೭. **ಮನಃ–**
ಸಂಕಲ್ಪಾದ್ಯಾತ್ಮಕವಾದ ಅಂತಃಕರಣ, ೧.

೮. **ಶಿವಃ–**
ಮಂಗಲಸ್ವರೂಪನಾದ ಪರಮಾತ್ಮ ೧ ರಿಂದ ೬.

೯. ***ಸಪ್ತಧಾತುಃ–**
ಶರೀರದಲ್ಲಿರುವ ರಕ್ತಾದಿಧಾತುಗಳು ಏಳು, ೨.